# ಆಹಾ ಸುದ್ದಿ!

★ ಸಸಿತೋಟ



ಮನೆಯಾಕೆ ತನ್ನ ಕೊನೆಯ ಹೆಸರನ್ನು ಬದಲಾಯಿಸಿಕೊಂಡರೆ ಏನು ಮಾಡಬೇಕು ಎಂಬುದನ್ನು ರಷ್ಯಾದ ಈ ವ್ಯಕ್ತಿ ಮಾಡಿ ತೋರಿಸಿದ್ದಾನಂತೆ. ಸೂಪರ್ ಬಜಾರ್‌ನ ಹೆಸರಿಗೆ ಬದಲಾಯಿಸಿಕೊಂಡರೆ ತಿಂಗಳಿಗೆ 1200 ಡಾಲರ್ ಉಡುಗೊರೆ ಸಿಗುತ್ತದೆಂಬ ಆಮಿಷದಿಂದ ಆಕೆ ಹೆಸರು ಬದಲಾಯಿಸಿಕೊಂಡಿದ್ದಕ್ಕೆ ಕೋಪಗೊಂಡ ಪತಿ ಆಕೆಯ ಕಾರಿನೊಳಗೆ ಮಿಕ್ಸ್ ಆಗಿದ್ದ ಒದ್ದೆ ಸಿಮೆಂಟ್ ಅನ್ನು ತುಂಬಿಸಿದನಂತೆ. ಹೆಸರು ಬದಲಾಯಿಸಿಕೊಂಡಿದ್ದಕ್ಕೆ ಈಗ ಕಾರು, ಪತಿ ಎಲ್ಲವನ್ನೂ ಬದಲಾಯಿಸುವ ಅದೃಷ್ಟ ಆಕೆಗೆ.



ಅಮೆರಿಕದ ಹಲವು ನಗರಗಳಲ್ಲಿ ಮ್ಯೂಸಿಯಂ ಆಫ್ ಐಸ್‌ಕ್ರೀಂ ಪ್ರದರ್ಶನ ನಡೆಯುತ್ತಿದೆಯಂತೆ. ಒಂದೊಂದು ಕೊಠಡಿಯಲ್ಲೂ ಒಂದೊಂದು ರೀತಿಯ ಐಸ್‌ಕ್ರೀಂನ ಪರಿಮಳ. ಜೊತೆಗೆ ಐಸ್‌ಕ್ರೀಂ ಮೇಲೆ ಚಿಮುಕಿಸುವ ಪೆಪ್ಪರ್‌ಮಿಂಟ್‌ಗಳ ಕೊಳದಲ್ಲಿ ಉರುಳಾಡಬಹುದಂತೆ. ದೊಡ್ಡವರು ಮಕ್ಕಳಂತಾಗುವುದು ಹೇಗೆ ಎಂಬುದರ ಪ್ರಾತ್ಯಕ್ಷಿಕೆಯೂ ನಡೆಯುತ್ತಿರಬಹುದು.

ಸ್ಲೊವೆನಿಯ ಕಂಪೆನಿಯೊಂದು ಸಮಾಧಿ ಕಲ್ಲಿಗೆ ಡಿಜಿಟಲ್ ಟಚ್ ನೀಡಿದೆಯಂತೆ. ಕಲ್ಲಿಗೆ 48 ಇಂಚಿನ ಟಿವಿ ಪರದೆಯ ಜೊತೆಗೆ ಹವಾಮಾನ ವೈಪರೀತ್ಯ, ಕಿಡಿಗೇಡಿಗಳ ದುಷ್ಕೃತ್ಯದಿಂದ ಆ ಕಲ್ಲು ಬಚಾವಾಗುವ ತಂತ್ರಜ್ಞಾನ ಸೇರಿಸಿದ್ದಾರಂತೆ. ಸತ್ತ ವ್ಯಕ್ತಿಯ ಹೆಸರಿನ ಪಕ್ಕ ಇಡೀ ಕಾದಂಬರಿಯನ್ನೇ ಬರೆಯುವಷ್ಟು ಡಿಜಿಟಲ್ ತಂತ್ರಜ್ಞಾನ ಒದಗಿಸಿದೆಯಂತೆ ಆ ಕಂಪೆನಿ. ಒಳಗಿರುವ ಹೆಣಕ್ಕೇನಾದರೂ ಜೀವ ಬಂದರೆ, ಹೊಟ್ಟೆಕಿಚ್ಚಿನಿಂದ ಕರುಬಬಹುದು.



ಅಮೆರಿಕಾದ ವಕೀಲೆ ಮೇಗಾನ್ ಬಟ್ಲರ್ ತನ್ನ ವಿವಾಹದ ಸಂದರ್ಭದಲ್ಲಿ ವಿಭಿನ್ನವಾಗಿ ಆಲೋಚನೆ ಮಾಡಿದಳಂತೆ. ಬ್ರೈಡ್ಸ್‌ಮೇಡ್‌ಗಳು ಸಾಮಾನ್ಯವಾಗಿ ಹಿಡಿದುಕೊಳ್ಳುವ ಹೂಗುಚ್ಛದ ಬದಲು ಪ್ರಾಣಿಗಳ ಶೆಲ್ಟರ್‌ನಿಂದ ತಂದ ಬೆಕ್ಕು–ನಾಯಿ ಮರಿಗಳನ್ನು ಹಿಡಿದುಕೊಂಡಿದ್ದರಂತೆ. ಹೂಗುಚ್ಛದಿಂದ ಪರಿಸರ ಮಾಲಿನ್ಯ ಮಾಡುವ ಬದಲು ಈ ಬೆಕ್ಕು– ನಾಯಿ ಸ್ನೇಹಿ ಐಡಿಯಾ ಎಷ್ಟು ಜನಪ್ರಿಯವಾಯ್ತೆಂದರೆ ಶೆಲ್ಟರ್‌ನಿಂದ ಬಂದ ಮರಿಗಳು ಕಾಯಂ ಮನೆಗಳನ್ನು ಸೇರಿದವಂತೆ.

ಅಮೆರಿಕಾದಲ್ಲಿ ಕೇಜ್ (ಪಂಜರ)ನಲ್ಲಿ ಕೂತು ನಿಕೊಲಸ್ ಕೇಜ್ ಸಿನಿಮಾ ನೋಡಿದರೆ ಹೇಗಿರುತ್ತದೆ ಎಂಬ ರಿಯಾಲಿಟಿ ಶೋ ಶುರುವಾಗಿದೆಯಂತೆ. ಪಿಟ್ (ಹೊಂಡ)ನಲ್ಲಿ ಕೂತು ಬ್ರಾಡ್ ಪಿಟ್ ಸಿನಿಮಾ ನೋಡಿದರೆ ಹೇಗಿರುತ್ತದೋ ಹಾಗೆಯೇ ಇರಬಹುದು ಅಷ್ಟೆ.



ಅಮೆರಿಕದ ಯುವಕ ಕೆವಿನ್ ಎಂಬಾತ ಟಿವಿ ಧಾರಾವಾಹಿ ನೋಡಿ ಪ್ರಯೋಗಕ್ಕೆ ಇಳಿದ. 10 ಮೆಗಾಫೋನ್‌ಗಳನ್ನು ನೇರವಾಗಿ ಜೋಡಿಸಿ ಕೂಗು ಹಾಕಿದನಂತೆ. ಏನೂ ಆಗಲಿಲ್ಲ. ನಂತರ ವೃತ್ತಾಕಾರವಾಗಿ ಜೋಡಿಸಿ ಕೂಗಿದ. ಪಕ್ಕದ ಅಪಾರ್ಟ್‌ಮೆಂಟ್‌ನವರು ಕೂಗು ಹಾಕಿ ಪೊಲೀಸ್ ಹಾಗೂ ಅಗ್ನಿಶಾಮಕ ದಳದವರನ್ನು ಕರೆಸಿದರಂತೆ. ಅಪಾರ್ಟ್‌ಮೆಂಟ್ ನಡುಗಿಸಿದ ಕೆವಿನ್ ಈಗ ಕಂಬಿಯ ಹಿಂದೆ ನಡುಗುತ್ತಿದ್ದಾನಂತೆ.